ಕರ್ನಾಟಕ ಸರ್ಕಾರ

ಸಂಖ್ಯೆ: ಕಂ/ಮುಜರಾಯಿ/ಸಿಆರ್-10/2017-18 / 743

ಆಡಳಿತಾಧಿಕಾರಿಗಳ ಕಾರ್ಯಾಲಯ
ಶ್ರೀ ಕ್ಷೇತ್ರ ನರಸಿಂಹ ಝರಣಾ ದೇವಸ್ಥಾನ, ಬೀದರ
ದಿನಾಂಕ: 12/06/2017

## - : : ಬಹಿರಂಗ ಹರಾಜು ಪ್ರಕಟಣೆ : : -

ಬೀದರ ನಗರದ ಶ್ರೀ ನರಸಿಂಹ ಝರಣಾ ದೇವಸ್ಥಾನದ ಆವರಣದಲ್ಲಿ ನಿರ್ಮಿಸಲಾದ 14 ವಾಣಿಜ್ಯ ಮಳಿಗೆಗಳನ್ನು (Commercial shops) ಮತ್ತು ವಾಹನಗಳ ನಿಲುಗಡೆ (Car & Two Wheeler parking)ಗಳನ್ನು ಬಾಡಿಗೆ (Lease) ಆಧಾರದ ಮೇಲೆ ವಾಣಿಜ್ಯ ಚಟುವಟಿಕೆ ನಡೆಸಲು ಇಚ್ಛೆಯುಳ್ಳವರು ಆಡಳಿತಾಧಿಕಾರಿ, ಶ್ರೀ ಕ್ಷೇತ್ರ ನರಸಿಂಹ ಝರಣಾ ದೇವಸ್ಥಾನ, ಬೀದರ ರವರಿಂದ ದಿನಾಂಕ: 17/07/2017 ರಂದು ಬೆಳಿಗ್ಗೆ 11:00 ಗಂಟೆಗೆ ನಡೆಯಲಿರುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಮಳಿಗೆ ಸಂಖ್ಯೆ: 1, 2 ಮತ್ತು 3 ಗಳ ಹರಾಜಿನಲ್ಲಿ ಭಾಗವಹಿಸಲು ರೂ. 6,000/- (ಆರು ಸಾವಿರ ಮಾತ್ರ) ಗಳನ್ನು ಹಿಂದಿರುಗಿಸಲಾಗದ ಮೊತ್ತವನ್ನು ಹಾಗೂ ರೂ. 60,000/- (ಅರವತ್ತು ಸಾವಿರ ಮಾತ್ರ) ಗಳನ್ನು ಭದ್ರತಾ ಠೇವಣಿ ರೂಪದಲ್ಲಿ ಆಡಳಿತಾಧಿಕಾರಿಗಳು, ಶ್ರೀ ನರಸಿಂಹ ಝರಣಾ ದೇವಸ್ಥಾನ, ಬೀದರ ಇವರ ಹೆಸರಿನಲ್ಲಿ ಡಿ.ಡಿ. ರೂಪದಲ್ಲಿ ಪಾವತಿಸತಕ್ಕದ್ದು.

ಮಳಿಗೆ ಸಂಖ್ಯೆ: 4, 6, 7, 8, 10, 11, 12, 13, 14, 15 ಮತ್ತು 16 ಗಳ ಹರಾಜಿನಲ್ಲಿ ಭಾಗವಹಿಸಲು ರೂ. 2,000/- (ಎರಡು ಸಾವಿರ ಮಾತ್ರ) ಗಳನ್ನು ಹಿಂದಿರುಗಿಸಲಾಗದ ಮೊತ್ತವನ್ನು ಹಾಗೂ ರೂ. 20,000/- (ಇಪ್ಪತ್ತು ಸಾವಿರ ಮಾತ್ರ) ಗಳನ್ನು ಭದ್ರತಾ ಠೇವಣಿ ರೂಪದಲ್ಲಿ ಆಡಳಿತಾಧಿಕಾರಿಗಳು, ಶ್ರೀ ನರಸಿಂಹ ಝರಣಾ ದೇವಸ್ಥಾನ, ಬೀದರ ಇವರ ಹೆಸರಿನಲ್ಲಿ ಡಿ.ಡಿ. ರೂಪದಲ್ಲಿ ಪಾವತಿಸತಕ್ಕದ್ದು.

ವಾಹನ ನಿಲುಗಡೆಯ ಹರಾಜಿನಲ್ಲಿ ಭಾಗವಹಿಸಲು ರೂ. 6,000/- (ಆರು ಸಾವಿರ ಮಾತ್ರ) ಗಳನ್ನು ಹಿಂದಿರುಗಿಸಲಾಗದ ಮೊತ್ತವನ್ನು ಹಾಗೂ ರೂ. 60,000/- (ಅರವತ್ತು ಸಾವಿರ ಮಾತ್ರ) ಗಳನ್ನು ಭದ್ರತಾ ಠೇವಣಿ ರೂಪದಲ್ಲಿ ಆಡಳಿತಾಧಿಕಾರಿಗಳು, ಶ್ರೀ ನರಸಿಂಹ ಝರಣಾ ದೇವಸ್ಥಾನ, ಬೀದರ ಇವರ ಹೆಸರಿನಲ್ಲಿ ಡಿ.ಡಿ. ರೂಪದಲ್ಲಿ ಪಾವತಿಸತಕ್ಕದ್ದು.

ಹರಾಜಿನ ಆಧಾರದ ಮೇಲೆ ಬಾಡಿಗೆಗೆ ಒಳಪಡುವ ಎಲ್ಲಾ ವಾಣಿಜ್ಯ ಮಳಗೆಗಳ ವಿವರಗಳು ಹಾಗೂ ಷರತ್ತುಗಳನ್ನು ಸಹಾಯಕ ಆಯುಕ್ತರು, ಬೀದರ ಹಾಗೂ ಆಡಳಿತಾಧಿಕಾರಿಗಳು, ಶ್ರೀ ಕ್ಷೇತ್ರ ನರಸಿಂಹ ಝರಣಾ ದೇವಸ್ಥಾನ, ಬೀದರ ರವರ ಕಚೇರಿಯಲ್ಲಿ ಪಡೆದುಕೊಳ್ಳಬಹುದು ಮತ್ತು ಬೀದರ ಜಿಲ್ಲಾ ವೆಬ್ ಸೈಟ್ ವಿಳಾಸ www.bidar.nic.in ನಲ್ಲಿ ಮಾಹಿತಿಯನ್ನು ಪಡೆಯಬಹುದು.

ಆಡಳಿತಾಧಿಕಾರಿಗಳು,
ಶ್ರೀ ಕ್ಷೇತ್ರ ನರಸಿಂಹ ಝರಣಾ ದೇವಸ್ಥಾನ, ಬೀದರ

ಇವರಿಗೆ,

ಸಹಾಯಕ ನಿರ್ದೇಶಕರು,
ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೀದರ.

ಪ್ರತಿಯನ್ನು:

1. ಜಿಲ್ಲಾಧಿಕಾರಿಗಳು, ಬೀದರ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ, ಎನ್.ಐ.ಸಿ., ಬೀದರ ರವರ ಸೂಕ್ತ ಕ್ರಮಕ್ಕಾಗಿ.

307

## ನಿರ್ಬಂಧಗಳು ಮತ್ತು ಷರತ್ತುಗಳು

1. ಕೇವಲ ಭಾರತೀಯ ನಿವಾಸಿಗಳು ಮಾತ್ರ ಬಹಿರಂಗ ಹರಾಜಿನಲ್ಲಿ ಪಾಲ್ಗೊಳ್ಳಬಹುದು.
2. 14 ವಾಣಿಜ್ಯ ಮಳಿಗೆಗಳನ್ನು ಮತ್ತು ವಾಹನಗಳ ನಿಲುಗಡೆ ಗಳನ್ನು ಬಹಿರಂಗ ಹರಾಜಿನಲ್ಲಿ ಬಾಡಿಗೆ ಆಧಾರದ ಮೇಲೆ ಹರಾಜು ಮಾಡಲಾಗುವುದು.
3. ದಿನಾಂಕ: 01/08/2017 ರಂದು ಅಂಗಡಿಗಳ ಸ್ವಾಧೀನತೆ ನೀಡಲಾಗುವುದು.
4. ಒಬ್ಬ ಹರಾಜುದಾರರು ಗರಿಷ್ಠ 03 ಮಳಿಗೆಗಳ ಹರಾಜಿನಲ್ಲಿ ಭಾಗವಹಿಸಬಹುದು.
5. ವಾಣಿಜ್ಯ ಮಳಿಗೆಗಳ ಹರಾಜಿಗೆ ಸಂಬಂಧಿಸಿದಂತೆ;
   a) ಮಳಿಗೆ ಸಂಖ್ಯೆ: 1, 2 ಮತ್ತು 3 ಗಳನ್ನು ಒಂದೇ ಹರಾಜು ಮಾಡಲಾಗುವುದು ಹಾಗೂ ಸದರಿ ಹೊಟೆಲ್/ಕ್ಯಾಂಟೀನ್ ಗಾಗಿ ಕಾಯ್ದಿರಿಸಲಾಗಿದೆ.
      (1) ಹರಾಜಿನಲ್ಲಿ ಭಾಗವಹಿಸಲು ರೂ. 6,000/- (ಆರು ಸಾವಿರ ಮಾತ್ರ) ಗಳನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಮಾಡತಕ್ಕದ್ದು.
      (2) ಹರಾಜಿನಲ್ಲಿ ಭಾಗವಹಿಸಲು ರೂ. 60,000/- (ಅರವತ್ತು ಸಾವಿರ ಮಾತ್ರ) ಮರುಪಾವತಿಯಾಗತಕ್ಕ ಮೊತ್ತವನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಜಮ ಮಾಡತಕ್ಕದ್ದು. ಒಂದು ವೇಳೆ ಯಶಸ್ವಿಯಾಗಿ ಗುತ್ತಿಗೆ ಪಡೆದಲ್ಲಿ ಸದರಿ ಮೊತ್ತವನ್ನು ಭದ್ರತಾ ಠೇವಣಿಯಾಗಿ ಪರಿಗಣಿಸಲಾಗುವುದು ಹಾಗೂ ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರವೇ ಪಾವತಿಸಲಾಗುವುದು ಹಾಗೂ ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.
      (3) ಯಶಸ್ವಿ ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸುವ ಮುಂಚೆ ಪಾವತಿಸಲಾದ ರೂ. 60,000/- (ಅರವತ್ತು ಸಾವಿರ ಮಾತ್ರ) ಗಳೊಂದಿಗೆ ರೂ. 1,20,000/- (ಒಂದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಒಂದು ವಾರದೊಳಗಾಗಿ ಇ.ಎಮ್.ಡಿ. ಠೇವಣಿ ರೂಪದಲ್ಲಿ ಪಾವತಿಸತಕ್ಕದ್ದು. ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರ ಮರುಪಾವತಿಸಲಾಗುವುದು ಹಾಗೂ ಇ.ಎಮ್.ಡಿ. ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.
   b) ಮಳಿಗೆ ಸಂಖ್ಯೆ: 4, 6, 7, 8, 10, 11, 12, 13, 14, 15 & 16 ಗಳಿಗೆ ಸಂಬಂಧಿಸಿದಂತೆ;
      (1) ಹರಾಜಿನಲ್ಲಿ ಭಾಗವಹಿಸಲು ರೂ. 2,000/- (ಎರಡು ಸಾವಿರ ಮಾತ್ರ) ಗಳನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಮಾಡತಕ್ಕದ್ದು.
      (2) ಹರಾಜಿನಲ್ಲಿ ಭಾಗವಹಿಸಲು ರೂ. 20,000/- (ಇಪ್ಪತ್ತು ಸಾವಿರ ಮಾತ್ರ) ಮರುಪಾವತಿಯಾಗತಕ್ಕ ಮೊತ್ತವನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಜಮ ಮಾಡತಕ್ಕದ್ದು. ಒಂದು ವೇಳೆ ಯಶಸ್ವಿಯಾಗಿ ಗುತ್ತಿಗೆ ಪಡೆದಲ್ಲಿ ಸದರಿ ಮೊತ್ತವನ್ನು ಭದ್ರತಾ ಠೇವಣಿಯಾಗಿ ಪರಿಗಣಿಸಲಾಗುವುದು ಹಾಗೂ ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರವೇ ಪಾವತಿಸಲಾಗುವುದು ಹಾಗೂ ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.
      (3) ಯಶಸ್ವಿ ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸುವ ಮುಂಚೆ ಪಾವತಿಸಲಾದ ರೂ. 20,000/- (ಇಪ್ಪತ್ತು ಸಾವಿರ ಮಾತ್ರ) ಗಳೊಂದಿಗೆ ರೂ. 40,000/- (ನಲವತ್ತು ಸಾವಿರ ಮಾತ್ರ)ಗಳನ್ನು ಒಂದು ವಾರದೊಳಗಾಗಿ ಇ.ಎಮ್.ಡಿ. ಠೇವಣಿ ರೂಪದಲ್ಲಿ ಪಾವತಿಸತಕ್ಕದ್ದು. ಠೇವಣಿ ರೂಪದಲ್ಲಿ ಪಾವತಿಸತಕ್ಕದ್ದು. ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರ ಮರುಪಾವತಿಸಲಾಗುವುದು ಹಾಗೂ ಇ.ಎಮ್.ಡಿ. ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.
6. ವಾಹನಗಳ ನಿಲುಗಡೆ ಹರಾಜಿಗೆ ಸಂಬಂಧಿಸಿದಂತೆ;
   (1) ಹರಾಜಿನಲ್ಲಿ ಭಾಗವಹಿಸಲು ರೂ. 6,000/- (ಆರು ಸಾವಿರ ಮಾತ್ರ) ಗಳನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಮಾಡತಕ್ಕದ್ದು.
   (2) ಹರಾಜಿನಲ್ಲಿ ಭಾಗವಹಿಸಲು ರೂ. 60,000/- (ಅರವತ್ತು ಸಾವಿರ ಮಾತ್ರ) ಮರುಪಾವತಿಯಾಗತಕ್ಕ ಮೊತ್ತವನ್ನು The Administrator, Sri. Narasimha Zharna Temple, Bidar ರವರ ಹೆಸರಿಗೆ ಡಿ.ಡಿ. ರೂಪದಲ್ಲಿ ಜಮ ಮಾಡತಕ್ಕದ್ದು. ಒಂದು ವೇಳೆ ಯಶಸ್ವಿಯಾಗಿ ಗುತ್ತಿಗೆ ಪಡೆದಲ್ಲಿ ಸದರಿ ಮೊತ್ತವನ್ನು

ಭದ್ರತಾ ಠೇವಣಿಯಾಗಿ ಪರಿಗಣಿಸಲಾಗುವುದು ಹಾಗೂ ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರವೇ ಪಾವತಿಸಲಾಗುವುದು ಹಾಗೂ ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.

(3) ಯಶಸ್ವಿ ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸುವ ಮುಂಚೆ ಪಾವತಿಸಲಾದ ರೂ. 60,000/- (ಅರವತ್ತು ಸಾವಿರ ಮಾತ್ರ) ಗಳೊಂದಿಗೆ ರೂ. 1,20,000/- (ಒಂದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಒಂದು ವಾರದೊಳಗಾಗಿ ಇ.ಎಮ್.ಡಿ. ಠೇವಣಿ ರೂಪದಲ್ಲಿ ಪಾವತಿಸತಕ್ಕದ್ದು. ಸದರಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದ ನಂತರ ಮರುಪಾವತಿಸಲಾಗುವುದು ಹಾಗೂ ಇ.ಎಮ್.ಡಿ. ಠೇವಣಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ.

7. ಯಶಸ್ವಿ ಗುತ್ತಿಗೆದಾರರು ಮಳಿಗೆಯ ಸ್ವಾಧೀನತೆ ಪಡೆಯುವ ಮುಂಚೆ ರೂ. 100/-ಗಳ ನಾನ್ ಜುಡಿಸಿಯಲ್ ಸ್ಟ್ಯಾಂಪ್ ಕಾಗದದ ಮೇಲೆ ಒಪ್ಪಂದದ ಕರಾರು ಪತ್ರವನ್ನು ದೇವಸ್ಥಾನದ ಆಡಳಿತಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
8. ಯಶಸ್ವಿ ಗುತ್ತಿಗೆದಾರರು ವಿದ್ಯುತ್ ಬಿಲ್ಲು, ನೀರು ಸರಬರಾಜು ಬಿಲ್ಲು ಹಾಗೂ ಇತರೆ ಶಾಸನಬದ್ಧವಾದ ಎಲ್ಲಾ ವೆಚ್ಚಗಳನ್ನು ಪಾವತಿಸತಕ್ಕದ್ದು.
9. ಯಶಸ್ವಿ ಗುತ್ತಿಗೆದಾರರು ಮಳಿಗೆಯಲ್ಲಿ ವ್ಯಾಪಾರ ಪ್ರಾರಂಭಿಸುವ ಮುಂಚೆ ಸಂಬಂಧಪಟ್ಟ ಇಲಾಖೆಯಿಂದ ವ್ಯಾಪಾರ ಪರವಾನಿಗೆ (Trade license) ಪಡೆಯತಕ್ಕದ್ದು.
10. ಯಶಸ್ವಿ ಗುತ್ತಿಗೆದಾರರು ಪ್ರತಿ ತಿಂಗಳ 5ನೇ ತಾರೀಖಿನಂದು ಸದರಿ ತಿಂಗಳ ಬಾಡಿಗೆಯನ್ನು ಮುಂಗಡವಾಗಿ ಪಾವತಿಸತಕ್ಕದ್ದು, ತಪ್ಪಿದಲ್ಲಿ ಮಾಹೆಯಾನ ಶೇಕಡಾ 6% ರಂತೆ ಬಡ್ಡಿ ಪಾವತಿಸಬೇಕಾಗುತ್ತದೆ ಹಾಗೂ ಸತತ ಮೂರು ತಿಂಗಳ ಬಾಡಿಗೆ ಪಾವತಿಸಲು ವಿಫಲರಾದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಒಪ್ಪಂದದ ಕರಾರು ವಜಾಗೊಳಿಸಲಾಗುವುದು ಹಾಗೂ ಸದರಿ ಮೊತ್ತವನ್ನು ಭದ್ರತಾ ಠೇವಣಿಯಿಂದ ಕಡಿತಗೊಳಿಸಲಾಗುವುದು.
11. ದೇವಸ್ಥಾನದ ಆಸ್ತಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡಿದ್ದು ಕಂಡುಬಂದಲ್ಲಿ ಭದ್ರತಾ ಠೇವಣಿಯಿಂದ ಕಡಿತಗೊಳಿಸಲಾಗುವುದು.
12. ದೇವಸ್ಥಾನದ ಪ್ರಾಧಿಕಾರದ ಅನುಮತಿ ಪಡೆಯದೇ ಉಪಭೋಗದಾರನು ಉಪ-ಗುತ್ತಿಗೆ ನೀಡಲು ಅಥವಾ ಯಾವುದೇ ಇತರೆ ಮಾರ್ಪಾಡು ಮಾಡುವಂತಿಲ್ಲ.
13. ಮಳಿಗೆಗಳನ್ನು ಶುಚಿತ್ವವಾಗಿ ಹಾಗೂ ಆರೋಗ್ಯಕರವಾಗಿಡತಕ್ಕದ್ದು ಮತ್ತು ಯಾವುದೇ ಸಮಯದಲ್ಲಿ ತಪಾಸಣೆಗಾಗಿ ತೆರೆದಿಡತಕ್ಕದ್ದು.
14. ಮಾಂಸಾಹಾರ, ಮದ್ಯ ಹಾಗೂ ಇತರೆ ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟುಮಾಡುವ ಸಾಮಗ್ರಿಗಳನ್ನು ಮಾರಾಟ ಮಾಡತಕ್ಕದ್ದಲ್ಲ.
15. ಗರಿಷ್ಠ ಮಾರಾಟ ಬೆಲೆಯು ವಸ್ತುಗಳ MRP ಗಿಂತ ಜಾಸ್ತಿ ಇರತಕ್ಕದ್ದಲ್ಲ. MRP ಇರದಂತಹ ವಸ್ತುಗಳ ಬೆಲೆಯನ್ನು ದೇವಸ್ಥಾನದ ಆಡಳಿತ ಮಂಡಳಿಯಿಂದ ಬೆಲೆ ನಿಗಧಿಪಡಿಸಲಾಗುವುದು.
16. ಉಪಭೋಗದಾರನು ದೇವಸ್ಥಾನದ ಆವರಣದಲ್ಲಿ ಮಾದಕ ದ್ರವ್ಯ ಅಥವಾ ಜಿಗುಪ್ಸಾಕರ/ಹೇಸಿಗೆ ಹುಟ್ಟಿಸುವ ಸಾಮಗ್ರಿಗಳನ್ನು ಸಂಗ್ರಹಿಸುವುದು, ಇರಿಸಿಕೊಳ್ಳುವುದು, ನಿರ್ವಹಿಸುವುದು ಹಾಗೂ ಅಂತಹ ವಸ್ತುಗಳೊಂದಿಗೆ ವ್ಯಾಪಾರ ಮಾಡುವಂತಿಲ್ಲ.
17. ದೇವಸ್ಥಾನದ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸೂಚನೆಗಳನ್ನು ಅನುಸರಿಸತಕ್ಕದ್ದು.
18. MoA ಸಹಿ ಮಾಡುವ ಮುಂಚೆ ಯಾವುದೇ ರೀತಿಯ ಕಾರಣ ನೀಡದೇ ಅತ್ಯಧಿಕ ಬಿಡ್ ನ್ನು ಒಪ್ಪುವ ಅಥವಾ ನಿರಾಕರಿಸುವ ಅಧಿಕಾರವು ದೇವಸ್ಥಾನದ ಆಡಳಿತಾಧಿಕಾರಿಗಳಿಗೆ ಇರುತ್ತದೆ.
19. ಅಂಗಡಿಯ ಸ್ವಾಧೀನತೆ ನೀಡಿದ ದಿನಾಂಕದಿಂದ ಹನ್ನೊಂದು ತಿಂಗಳ ವರೆಗೆ ಈ ಒಪ್ಪಂದದ ಕರಾರು ಚಾಲ್ತಿಯಲ್ಲಿರುತ್ತದೆ.
20. ಮೇಲಿನ ನಿರ್ಬಂಧಗಳನ್ನು ಹಾಗೂ ಷರತ್ತುಗಳಲ್ಲಿ ಯಾವುದೇ ಒಂದು ಉಲ್ಲಂಘನೆಯಾದಲ್ಲಿ ಒಪ್ಪಂದದ ಕರಾರನ್ನು ರದ್ದುಪಡಿಸಲಾಗುವುದು ಹಾಗೂ ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದಿಲ್ಲ.

ಸಹಾಯಕ ಆಯುಕ್ತರು, ಬೀದರ ಹಾಗೂ
ಆಡಳಿತಾಧಿಕಾರಿಗಳು,
ಶ್ರೀ ನರಸಿಂಹ ಝರಣಾ ದೇವಸ್ಥಾನ, ಬೀದರ